ದಿನಾಂಕಃ 19.11.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎನ್ ಎಸ್ ಜಿ ವಕೀಲರಿಂದಃ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿದ್ದು, ಅವು ಸತ್ಯ ವಾಗಿರುತ್ತವೆ.

1. ವಾದಿ ಬರೆದುಕೊಟ್ಟಿರುವ ಅಧಿಕಾರ ಪತ್ರವನ್ನು ಹಾಜರು ಮಾಡಿದ್ದು ನಿಪಿ-1,

2. ವಾದಿಗೆ ಸಂಬಂಧಿಸಿದ ವೈದ್ಯಕೀಯ ದಾಖಲೆಗಳನ್ನು ಒಟ್ಟಾಗಿ ನಿಪಿ-2,

3. ಪ್ರತಿವಾದಿ 1 ರಿಂದ 3 ರವರು ವಾದಿಯ ಹೆಸರಿಗೆ ಬರೆದುಕೊಟ್ಟಿರುವ ಜಮೀನಿನ ಕರಾರು ಪತ್ರವನ್ನು

ನಿಪಿ-3 ಎಂದು ಗುರುತಿಸಲಾಯಿತು. ನಿಪಿ 3 ರ ಪ್ರತಿ ಪುಟಕ್ಕೆ ವಾದಿ ಮತ್ತು ಪ್ರತಿವಾದಿ 1 ರಿಂದ 3 ರವರು ಸಹಿ ಮಾಡಿದ್ದು ಕೊನೆಯ ಪುಟದಲ್ಲಿರುವ ಪ್ರತಿವಾದಿ 1 ರಿಂದ 3 ರವರ ಸಹಿಗಳನ್ನು ನಿಪಿ 3(ಎ) ಯಿಂದ (ಸಿ) ಎಂದು ವಾದಿಯ ಸಹಿಯನ್ನು ನಿಪಿ 3(ಡಿ) ಎಂದು ಗುರುತಿಲಾಯಿತು. ನಿಪಿ 3 ಕ್ಕೆ ಮಹದೇವ ಮತ್ತು ವೆಂಕಟೇಶರವರು ಸಾಕ್ಷಿಗಳಾಗಿ ಸಹಿ ಮಾಡಿದ್ದು ಸದರಿಯವರ ಸಹಿಗಳನ್ನು ಕ್ರಮವಾಗಿ ನಿಪಿ 3(ಇ) ಮತ್ತು (ಎಫ್) ಎಂದು ಗುರುತಿಸಲಾಯಿತು. ನಿಪಿ 3 ನ್ನು ಜಗದೀಶರವರು ಬರೆದಿದ್ದು, ಸದರಿಯವರ ಸಹಿಯನ್ನು ನೋಡುತ್ತಿದ್ದು ಅದನ್ನು ನಿಪಿ 3(ಜಿ) ಎಂದು ಗುರುತಿಸಲಾಯಿತು.

4. ನಿಪಿ 3 ಕ್ಕೆ ಸಂಬಂಧಿಸಿದಂತೆ ಕರಾರು ಪತ್ರದ ಪೂರಕ ಪತ್ರವನ್ನು ಪ್ರತಿವಾದಿ 1 ರಿಂದ 4 ರವರು ಬರೆದುಕೊಟ್ಟಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ನಿಪಿ 4 ರ ಪ್ರತಿ ಪುಟಕ್ಕೆ ವಾದಿ ಮತ್ತು ಪ್ರತಿವಾದಿ 1 ರಿಂದ 4 ರವರು ಸಹಿ ಮಾಡಿದ್ದು ಕೊನೆಯ ಪುಟದಲ್ಲಿರುವ ಪ್ರತಿವಾದಿ 1 ರಿಂದ 4 ರವರ ಸಹಿಗಳನ್ನು ನಿಪಿ 4(ಎ) ಯಿಂದ (ಡಿ) ಎಂದು ವಾದಿಯ ಸಹಿಯನ್ನು ನಿಪಿ 4(ಇ) ಎಂದು ಗುರುತಿಲಾಯಿತು. ನಿಪಿ 4 ಕ್ಕೆ ಮಹದೇವ ಮತ್ತು ಶ್ರೀನಿವಾಸರವರು ಸಾಕ್ಷಿಗಳಾಗಿ ಸಹಿ ಮಾಡಿದ್ದು ಸದರಿಯವರ ಸಹಿಗಳನ್ನು ಕ್ರಮವಾಗಿ ನಿಪಿ 4(ಎಫ್) ಮತ್ತು (ಜಿ) ಎಂದು ಗುರುತಿಸಲಾಯಿತು. ನಿಪಿ 4 ನ್ನು ಜಗದೀಶರವರು ಬರೆದಿದ್ದು, ಸದರಿಯವರ ಸಹಿಯನ್ನು ನೋಡುತ್ತಿದ್ದು ಅದನ್ನು ನಿಪಿ 4(ಹೆಚ್) ಎಂದು ಗುರುತಿಸಲಾಯಿತು.

5. ಪ್ರತಿವಾದಿಗಳಿಗೆ ನೀಡಿರುವ ನೋಟೀಸಿನ ಪ್ರತಿಯನ್ನು ನಿಪಿ-5,

6. 4 ಅಂಚೆ ರಿಸೀದಿಗಳನ್ನು ನಿಪಿ- 6 ರಿಂದ 9,

7. 4 ಅಂಚೆ ಸ್ವೀಕೃತಿಗಳನ್ನು ನಿಪಿ-10 ರಿಂದ 13,

8. ಪ್ರತಿವಾದಿಗಳು ನೀಡಿರುವ ಪ್ರತ್ಯುತ್ತರವನ್ನು ನಿಪಿ-14,

9. ದಾವಾ ಆಸ್ತಿಗೆ ಸಂಬಂಧಿಸಿದಂತೆ ಎಂ ಆರ್ ರಿಜಿಸ್ಟರ್ ಎಕ್ಸ್ಟ್ರಾಕ್ಟ್ ಮತ್ತು ಆರ್ ಟಿ ಸಿ ಎಕ್ಸಾಕ್ಟ್ ನ್ನು ಹಾಜರು ಮಾಡಿದ್ದು ನಿಪಿ 15 ಮತ್ತು 16 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ಪುರಸ್ಕರಿಸಬೇಕೆಂದು ಕೋರುತ್ತೇನೆ.

ಪಾಟೀ ಸವಾಲುಃ ವಕೀಲರು ಸಮಯಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.